ಕನ್ನಡ ವಿಷ ವೈದ್ಯಶಾಸ್ತ್ರಕ್ಕೆ ಮಂಗರಸನ ಕೊಡುಗೆ

ಡಾ.ಮಹಾದೇವಿ ಆರ್. ಹಿರೇಮಠ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕರ್ನಾಟಕ ಕಲಾ ಮಹಾವಿದ್ಯಾಲಯ,
ಧಾರವಾಡ–580001

ಭಾರತೀಯ ವೈದ್ಯ ಪದ್ಧತಿಗಳಲ್ಲಿ ಹೆಚ್ಚು ಪುರಾತನವಾದದ್ದು ಹಾಗೂ ಪ್ರಸಿದ್ಧಿಯನ್ನು ಪಡೆದದ್ದು ಆಯುರ್ವೇದ. ಇದು ಮನುಷ್ಯನ ಜೀವಿಸುವಿಕೆಗೆ ಮೂಲಭೂತವಾದ ಶಾಸ್ತ್ರ. ಎಲ್ಲ ಪುರುಷಾರ್ಥ ಸಾಧನೆಗೂ ಆರೋಗ್ಯವೇ ಮೂಲ ಪ್ರಧಾನವಾದುದರಿಂದಲೂ ಅದನ್ನು ಆಯುರ್ವೇದ ಅಭ್ಯಾಸದಿಂದಲೇ ಸಾಧಿಸಬೇಕಾಗಿರುವುದರಿಂದಲೂ ಈ ವೇದವು ಐಹಿಕ, ಆಮುಶ್ಮಿಕ ಫಲ ಸಾಧನೆಗೆ ಪರಮಾವಶ್ಯಕವಾಗಿದೆ. ಆಯುರ್ವೇದ ಪದದ ಅರ್ಥವೇ ಬಹಳ ವಿಶಾಲವಾದುದು. 'ಆಯು' ಎಂದರೆ ಜೀವಿತಾವಧಿ, ವೇದ ಎಂದರೆ ಜ್ಞಾನ, ಪರಿಪೂರ್ಣ ಹಾಗೂ ಸುಖಕರ ಜೀವಿತಾವಧಿಗೆ ಬೇಕಾಗುವ ಸಮಗ್ರ ಜ್ಞಾನವನ್ನು ಒದಗಿಸಿಕೊಡುವುದೇ ಆಯುರ್ವೇದ. 'ಹಿತಾಹಿತಂ ಸುಖಂ ದುಃಖಮಾಯಸ್ತಸ್ಯ ಹಿತಾಹಿತಂ ಮಾನಂ ಚಿತ್‌ಚ್ಯಯತ್ ಪ್ರೋಕ್ತಂ ಆಯುರ್ವೇದಃ ಸ ಉಚ್ಯತೇ' ಎಂದರೆ ಹಿತವಾವುದು ಅಹಿತವಾವುದು, ಸುಖವಾವುದು ಮತ್ತು ದುಃಖವಾವುದು, ಆಯುಷ್ಯದ ಹಿತಗಳಾವವು ಎಂಬುದನ್ನು ಯಾವುದರಿಂದ ತಿಳಿಯಲಾಗುತ್ತದೆಯೋ ಅದಕ್ಕೆ ಆಯುವೇದವೆಂದು ಹೆಸರು. ಅಂದ ಮೇಲೆ ಈ ಪದ್ಧತಿ ದೇಹಾರೋಗ್ಯವನ್ನು ಮಾತ್ರವಲ್ಲ ಮನಸ್ಸಿನ ಸ್ವಾಸ್ಥ್ಯ ಹಾಗೂ ಆತ್ಮೋನ್ನತಿಯನ್ನು ಲಕ್ಷಿಸುತ್ತದೆ.

ಅಥರ್ವಣವೇದದ ಉಪಾಂಗವೆಂದು ಪ್ರಣೀತವಾದ ಆಯುರ್ವೇದವು ಈಶ್ವರನಿಂದ ಲೋಕ ಸೃಷ್ಟಿಕರ್ತನಾದ ಬ್ರಹ್ಮನಿಗೆ ಆಮೂಲಾಗ್ರವಾಗಿ ಬೋಧಿಸಲ್ಪಟ್ಟು ನಂತರ ಬ್ರಹ್ಮನಿಂದ ದಕ್ಷಪ್ರಜಾಪತಿಗೆ ಭೋದಿಸಲ್ಪಟ್ಟಿತೆಂದು ಪ್ರತೀತಿಯಿದೆ. ನಂತರ ದಕ್ಷಪ್ರಜಾಪತಿಯು ಆಶ್ವಿನಿ ದೇವತೆಗಳಿಗೆ ಈ ವಿದ್ಯೆಯನ್ನು ಹೇಳಿಕೊಟ್ಟನೆಂದೂ, ನಂತರ ಅವರಿಂದ ಇಂದ್ರನೂ ಕಲಿತನೆಂದೂ, ನಂತರ ಭಾರಧ್ವಾಜ ಋಷಿಯು ಇಂದ್ರನಿಂದ ಇದನ್ನು ಕಲಿತು ಅನೇಕ ಋಷಿಮುನಿಗಳಿಗೆ ಸಾಮಾನ್ಯರಿಗೆ ಕಲಿಸಿದರೆಂದು ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ. ಪುನರ್ವಸು ಅತ್ರೇಯ ಋಷಿಯು ಆಯುರ್ವೇದವನ್ನು ಅಧ್ಯಯನ ಮಾಡಿ ತನ್ನ ಆರು ಜನ ಶಿಷ್ಯರಾದ ಅಗ್ನಿವೇಶ, ಭೇಡ, ಜತುಕರ್ಣ, ಪರಾಶರ, ಹಾರೀತ ಮತ್ತು ಕ್ಷಾರಪಾಣಿಗಳಿಗೆ ಈ ಶಾಸ್ತ್ರವನ್ನು ಹೇಳಿಕೊಟ್ಟನೆಂದೂ ಪ್ರತೀತಿಯಿದೆ. ಇವರೆಲ್ಲರೂ ಪ್ರತ್ಯೇಕ ಗ್ರಂಥಗಳನ್ನು ರಚಿಸಿದಾಗ ಆಯಾ ತಂತ್ರಗಳ ಹೆಸರಿನೊಂದಿಗೆ ಒಂದೊಂದು ಗ್ರಂಥಗಳು ಸಿದ್ಧಾಂತಗಳು ಹುಟ್ಟಿಕೊಂಡು ಪ್ರಸಿದ್ಧವಾದವು. ಅವುಗಳಲ್ಲಿ ಅಗ್ನಿವೇಶ ಬರೆದ ತಂತ್ರ ಇನ್ನೂ ಶ್ರೇಷ್ಠವೆನಿಸಿತು. ಮುಂದೆ ಚರಕನೆಂಬ ಋಷಿಯು ಅಗ್ನಿವೇಶ ತಂತ್ರವನ್ನು ಪರಿಷ್ಕರಿಸಿ ಚರಕ ಸಂಹಿತೆಯನ್ನು ರಚಿಸಿದನು. 8 ಪ್ರಕರಣಗಳು, 30 ಅಧ್ಯಾಯಗಳನ್ನು ಒಳಗೊಂಡ ಈ ಗ್ರಂಥ ಮಾನವ ಶರೀರದ ಅಂತರ್ಯ (ಒಳ) ಭಾಗಕ್ಕೆ ಸಂಬಂಧಪಟ್ಟ ಚಿಕಿತ್ಸೆಯಲ್ಲಿ ಬಹು ಉತ್ತಮವಾದದ್ದೆಂಬ ಭಾವನೆಯಿದೆ. ಹೀಗಾಗಿ ಚರಕ ಸಂಹಿತೆಗೆ ಸುಮಾರು 50 ವ್ಯಾಖ್ಯಾನಗಳು ಸಿದ್ಧವಾಗಿವೆ. ಒಂಬತ್ತನೆಯ ಶತಮಾನದಲ್ಲಿದ್ದ ದೃಢಬಲ ಹನ್ನೊಂದನೆಯ ಶತಮಾನದಲ್ಲಿದ್ದ ಚಕ್ರಪಾಣಿದತ್ತ ಇವರ ವ್ಯಾಖ್ಯಾನಗಳು ಪ್ರಸಿದ್ಧವಾಗಿವೆ. ಈ ಪಂಥದವರು ವಿಶೇಷವಾಗಿ 'ಕಾಯಚಿಕಿತ್ಸೆ'ಗೆ ಪ್ರಾಧಾನ್ಯತೆಯನ್ನು ನೀಡಿದ್ದಾರೆ.

ಇನ್ನೊಂದು ಪಂಥ ಭಗವಾನ್ ಧನ್ವಂತರಿಯದು. ಧನ್ವಂತರಿ ದಿವೋದಾಸನೆಂಬುವನು ಕಾಶಿಯ ರಾಜನಾಗಿದ್ದನೆಂದು ಪ್ರತೀತಿ. ಇವನೂ ಇಂದ್ರನಿಂದ ಆಯುರ್ವೇದವನ್ನು ಕಲಿತು ಸುಶ್ರುತ, ಔಷಧೇನವ, ವೈತರಣ,

ಔರಭ್ರ, ಪುಷ್ಕಲಾವತ, ಕರವೀರ್ಯ ಇವರಿಗೆ 'ಶಲ್ಯಚಿಕಿತ್ಸೆ'ಯನ್ನೇ ಮುಖ್ಯವಾಗಿ ಉಪದೇಶಿಸಿದ. ಧನ್ವಂತರಿಯ ಶಿಷ್ಯರಲ್ಲಿ ಪ್ರಮುಖನಾದವನು ಸುಶ್ರುತ. ಇವನು ಬರೆದಿರುವ ಸಂಹಿತೆಯಲ್ಲಿ ಶಸ್ತ್ರಚಿಕಿತ್ಸೆಗೆ ಆದ್ಯತೆ ನೀಡಲಾಗಿದೆ. ಇದಕ್ಕೆ 'ಶಲ್ಯಾಂಗ'ವೆಂದು ಹೇಳಲಾಗುತ್ತದೆ. ಸುಶ್ರುತ ಸಂಹಿತೆಗೆ ಡಲ್ಹಣ ಮತ್ತು ಚಕ್ರಪಾಣಿದತ್ತರು ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಹಾಗೆಯೇ ಅಷ್ಟಾಂಗ ಹೃದಯ, ಕಶ್ಯಪ ಸಂಹಿತಾ, ಭೇಲಸಂಹಿತಾ, ಮಾಧವನಿಧಾನ, ಶಾರಂಗಧರ ಸಂಹಿತೆ, ಭಾವಪ್ರಕಾಶ, ಮಧುಕೋಶ, ಆತಂಕದರ್ಪಣ, ಸಿದ್ಧಯೋಗ, ಚಕ್ರಸಂಗ್ರಹ, ಮೊದಲಾದ ಮೂಲ ಹಾಗೂ ವ್ಯಾಖ್ಯಾನಗ್ರಂಥಗಳು ಆಯುರ್ವೇದದ ವ್ಯಾಪ್ತಿ ಹಾಗೂ ಜನಪ್ರಿಯತೆಯನ್ನು ಸೂಚಿಸುತ್ತವೆ. ಅದು ವೇದಗಳಿಗೆ ಸಮಾನವೆನ್ನುವಲ್ಲಿ ಅದರ ಪ್ರಾಮುಖ್ಯತೆ ಹಾಗೂ ಶ್ರೇಷ್ಠತೆಗಳು ಸುಸ್ಪಷ್ಟವಾಗಿವೆ. ಪೂರ್ವೋಕ್ತ ಗ್ರಂಥಗಳ ಪೈಕಿ ವಾಗ್ಭಟ ವಿರಚಿತ ಅಷ್ಟಾಂಗ ಹೃದಯ ವಿಶಿಷ್ಟವಾದುದು. ಅದು ವೈದ್ಯ ವಿಜ್ಞಾನದ ವಿಭಾಗಗಳನ್ನು ತಿಳಿಸುತ್ತದೆ. ಕಾಯಚಿಕಿತ್ಸಾ (ಮೆಡಿಸಿನ್) ಶಲ್ಯತಂತ್ರ (ಸರ್ಜರಿ) ಶಾಲಾಕ್ಯತಂತ್ರ (ಇಯರ್, ನೋಸ್, ಥ್ರೋಟ್) ಭೂತವಿದ್ಯಾ (ಸೈಕಿಯಾಟ್ರಿ) ಅಗದತಂತ್ರ (ಟಾಕ್ಸಿಕೊಲಾಜಿ, ವಿಷಶಾಸ್ತ್ರ) ರಸಾಯನಶಾಸ್ತ್ರ (ಜೆರಿಯಾಟ್ರಿಕ್ಸ) ಮತ್ತು ವಾಜೀಕರಣ (ಸೈಯನ್ಸ್ ಆಫ್ ಅಫ್ರೊಡೈಸಿಸ್) ಇವೇ ಆ ಎಂಟು ವಿಭಾಗಗಳು. ಈ ಕಾರಣದಿಂದಾಗಿ ಅತ್ರೇಯ ಹಾಗೂ ಧನ್ವಂತರಿ ಪಂಥಗಳು ಭಾರತೀಯ ವೈದ್ಯವಿಜ್ಞಾನ ಕ್ಷೇತ್ರದಲ್ಲಿ ಸುಪ್ರಸಿದ್ಧವೆನ್ನುವುದು ಸರ್ವವೇದ್ಯ, ಆಯುರ್ವೇದ ಪದ್ಧತಿಯ ಜೊತೆ ಜೊತೆಗೆ ಅದರ ಬೇರೆ ಬೇರೆ ಮುಖಗಳೆಂಬಂತೆ ಪ್ರಕೃತಿ ಚಿಕಿತ್ಸೆ, ರಸಚಿಕಿತ್ಸೆ, ನಾಡಿವಿಜ್ಞಾನ, ಯೋಗ ಪದ್ಧತಿಗಳೂ ಜನಪ್ರಿಯವಾಗಿವೆ.

ಸಂಸ್ಕೃತ ಪ್ರಾಕೃತಗಳಲ್ಲಷ್ಟೇ ಅಲ್ಲದೆ ಬೌದ್ಧ ಸಾಹಿತ್ಯದಲ್ಲಿಯೂ ವೈದ್ಯ ಸಂಬಂಧವಾದ ಉಲ್ಲೇಖಗಳು ದೊರೆಯುತ್ತವೆ. ನಾಗಾರ್ಜುನ, ಜೀವಕ ಮೊದಲಾದವರು ವೈದ್ಯಶಾಸ್ತ್ರದಲ್ಲಿ ಸುಪ್ರಸಿದ್ಧರಾಗಿದ್ದರು. ಬೌದ್ಧ ಮತ ಪ್ರಸಾರದೊಂದಿಗೆ ಆಯುರ್ವೇದ ವೈದ್ಯಶಾಸ್ತ್ರ ಕುರಿತ ಜ್ಞಾನವು ಟಿಬೆಟ್, ಮಧ್ಯ ಏಷ್ಯಾ, ಚೀನಾ ಮತ್ತು ಶ್ರೀಲಂಕಾಗಳಲ್ಲಿ ಹರಡಿತು. ಅಲೆಕ್ಸಾಂಡರ್ ಭರತಖಂಡದ ಮೇಲೆ ದಾಳಿನಡೆಸಿದಾಗ ಅಲೆಕ್ಸಾಂಡರ್ನಿಗೆ ಸರ್ಪ ಕಚ್ಚಿ ಸಾವಿನಂಚಿನಲ್ಲಿರುವಾಗ ಸರ್ಪಾದಿ ಸಂಬಂಧವಾದ ವಿಷಗಳಿಗೆ ಅವನ ಸೈನ್ಯದ ವೈದ್ಯರ ಬಳಿ ಮದ್ದುಗಳಿರಲಿಲ್ಲವೆಂದೂ ಅವನು ವೈರಿ ಎಂಬುದನ್ನೂ ಪರಿಗಣಿಸದೆ ಭಾರತೀಯ ಆಯುರ್ವೇದ ವೈದ್ಯರು ವಿಷನಿವಾರಣೆ ಮಾಡಿದರೆಂದೂ, ಇದರಿಂದ ಮನ ಪರಿವರ್ತನೆಯಾದ ಅಲೆಕ್ಸಾಂಡರ್ ಭಾರತದ ಮೇಲೆ ಇನ್ನು ಮೇಲೆ ಯುದ್ಧ ಮಾಡುವುದಿಲ್ಲವೆಂದು ಸಾರಿದ್ದೇ ಅಲ್ಲದೆ, ಅವನು ಸ್ವದೇಶಕ್ಕೆ ಹಿಂದಿರುಗುವಾಗ ಇಲ್ಲಿಯ ಕೆಲವು ವೈದ್ಯರನ್ನು ತನ್ನ ಜೊತೆಯಲ್ಲಿಯೇ ಕರೆದುಕೊಂಡು ಹೋದನೆಂದೂ ಪ್ರತೀತಿಯಿದೆ. ಭಾರತದೊಡನೆ ಅರಬ್ಬರ ಸಂಪರ್ಕವುಂಟಾದುದರ ಫಲವಾಗಿ ಅನೇಕ ಭಾರತೀಯ ವೈದ್ಯಗ್ರಂಥಗಳು ಅರಬ್ಬಿ ಭಾಷೆಗೆ ತರ್ಜುಮೆ ಗೊಂಡಿವೆ. ಅದರಂತೆ ಅರಬ್ಬೀ ವೈದ್ಯ ವಿದ್ವಾಂಸನೊಬ್ಬ, 'ಸುಶ್ರುತ ಸಂಹಿತೆ'ಯನ್ನು 'ಸಸ್ರುದ್ ಕಿಲಲ್– ಸಮುರಲ್–ಹಿಂದ್–ಇ' ಎಂಬ ಹೆಸರಿನಲ್ಲಿ ಅರಬ್ಬಿ ಭಾಷೆಗೆ ತರ್ಜುಮೆಗೊಳಿಸಿದ. ಅಲಿಕಾಬನ್ ಜೈನ್ ಎಂಬ ವಿದ್ವಾಂಸ ಚರಕ ಸಂಹಿತೆಯನ್ನು 'ಸರಗ್' ಎಂಬ ಹೆಸರಿನಲ್ಲಿ ಭಾಷಾಂತರಿಸಿದನು. ಅಂತೆಯೆ ಮಾಧವ ನಿಧಾನ 'ಬದನ್' ಎಂದೂ ಅಷ್ಟಾಂಗ ಹೃದಯ 'ಆಷ್ಟ್ಂಕರ್' ಎಂದೂ ಅನಂತರ ಆರೇಬಿಕರಣವಾದವು. ಇರಾನ್‌ನ ದೊರೆ 1ನೇ ಖೂಸ್ರೋವಿನ (ಕ್ರಿ.ಶ. 531–579) ಆಶ್ರಯದಲ್ಲಿದ್ದ 'ಬುರ್‌ಜೂಯ' ಎಂಬ ವಿದ್ವಾಂಸ ಆಯುರ್ವೇದವನ್ನು ಆಮೂಲಾಗ್ರವಾಗಿ ವ್ಯಾಸಂಗ ಮಾಡಿದ್ದನಂತೆ. ಹೀಗೆ ಭಾರತೀಯ ಆಯುರ್ವೇದ ತನ್ನ ಮಹತ್ವದಿಂದಾಗಿ ಅನ್ಯದೇಶಿಯರನ್ನು ಆಕರ್ಷಿಸಿತ್ತು.

ಕರ್ನಾಟಕದಲ್ಲಿಯೂ ಸಹ ಅನೇಕ ವೈದ್ಯರು ವೈದ್ಯವೃತ್ತಿಯಲ್ಲಿ ಪ್ರವೀಣರಾಗಿದ್ದು, ತಮ್ಮ ಅನುಭವಗಳನ್ನು ಸಾಹಿತ್ಯ ರೂಪದಲ್ಲಿ ದಾಖಲಿಸಿದ್ದಾರೆ. ಇವರಲ್ಲಿ ಎಂಟನೆಯ ಶತಮಾನದ ಉಗ್ರಾದಿತ್ಯ, ಹನ್ನೆರಡನೆಯ ಶತಮಾನದ ಬೋಪದೇವ, ಹೇಮಾದ್ರಿ ಮುಂತಾದವರು. ಆದರೆ ಇವರೆಲ್ಲ ಸಂಸ್ಕೃತದ ವೈದ್ಯಕವಿಗಳು, ಉಗ್ರಾದಿತ್ಯನ 'ಕಲ್ಯಾಣಕಾರಕ'ವೇ ಕರ್ನಾಟಕದಲ್ಲಿ ಸಿದ್ಧವಾದ ಮೊಟ್ಟಮೊದಲ ಸ್ವತಂತ್ರ ವೈದ್ಯಕೃತಿ. ಇದನ್ನು ಅನುಸರಿಸಿಯೇ ಜಗದ್ದಳ

ಸೋಮನಾಥ ಕವಿ, (ಕಿ.ಶ 1175) ಕನ್ನಡದಲ್ಲಿ 'ಕರ್ನಾಟಕ ಕಲ್ಯಾಣಕಾರಕ'ವೆಂಬ ಹೆಸರಿನಿಂದ ಸ್ವತಂತ್ರ ಸಂಪೂರ್ಣ ಕೃತಿಯನ್ನು ಬರೆದಿದ್ದಾನೆ. ಕನ್ನಡ ಸಾಹಿತ್ಯದ ಕೆಲವು ಕೃತಿಗಳಲ್ಲಿ ವೈದ್ಯಶಾಸ್ತ್ರವು ಪ್ರಾಸಂಗಿಕವಾಗಿ ಅಲ್ಲಲ್ಲಿ ಚರ್ಚಿಸಲ್ಪಟ್ಟರೆ ಕೆಲವು ಕೃತಿಗಳು ವೈದ್ಯಶಾಸ್ತವನ್ನು ದಾಖಲಿಸಲೆಂದೇ ರಚಿಸಲ್ಪಟ್ಟವುಗಳು. ಕೆಲವು ಕೃತಿಗಳಲ್ಲಂತೂ ವಿಷಯ ವಿವರಣೆಗಾಗಿ ವೈದ್ಯಕವಿಗಳು ಮಾಡಿಕೊಂಡ ವರ್ಗೀಕರಣ ಅದ್ಭುತವಾದದ್ದು. ಸಾವಿರ ವರ್ಷಗಳಷ್ಟು ಹಿಂದೆಯೇ ಕನ್ನಡದ ವೈದ್ಯಶಾಸ್ತ್ರದ ಕವಿಗಳು ವೈದ್ಯದಲ್ಲೂ ಸಾಮಾನ್ಯವೈದ್ಯ, ಪುರುಷವೈದ್ಯ, ಸ್ತ್ರೀವೈದ್ಯ, ಬಾಲವೈದ್ಯ, ಗೋವೈದ್ಯ ಅಶ್ವವೈದ್ಯ, ಗಜವೈದ್ಯ, ವಿಷವೈದ್ಯ ಎಂಬುದಾಗಿ ಉಪಶಾಖೆಗಳನ್ನಾಗಿ ಮಾಡಿಕೊಂಡಿದ್ದಾರೆ. ಕನ್ನಡದಲ್ಲಿ ಈಗ ತಿಳಿದಿರುವ ಮಟ್ಟಿಗೆ ಕೀರ್ತಿವರ್ಮನ ಗೋವೈದ್ಯವೇ (ಕ್ರಿ.ಶ.ಸು 1070) ಮೊದಲನೆಯ ವೈದ್ಯಗ್ರಂಥವಾಗಿದೆ

ತದನಂತರದಲ್ಲಿ ರಚನೆಯಾದ ಕೃತಿ ಎಂದರೆ ಜಗದ್ದಳ ಸೋಮನಾಥನ ಕಲ್ಯಾಣಕಾರಕವನ್ನು (ಕ್ರಿ.ಶ.1175) ಹೆಸರಿಸಬೇಕಾಗುತ್ತದೆ. ಪೂಜ್ಯಪಾದನ ಸಂಸ್ಕೃತ ಕಲ್ಯಾಣಕಾರಕದ ಅನುವಾದವಾಗಿರುವ ಇದು ಕನ್ನಡದಲ್ಲಿ ಸಾಮಾನ್ಯ ವೈದ್ಯವನ್ನು ಬೋಧಿಸುವ ಮೊದಲನೆಯ ಗ್ರಂಥ. ಒಂದನೆಯ ಮಂಗರಸನ ಖಗೇಂದ್ರ ಮಣಿದರ್ಪಣವು (ಕ್ರಿ.ಶ. 1360) ವಿಷವೈದ್ಯವನ್ನು ವಿಸ್ತಾರವಾಗಿ ನಿರೂಪಿಸುವ ಕೃತಿಯಾಗಿದೆ. ಇವರುಗಳಲ್ಲದೆ ಕ್ರಿ.ಶ. 12 ರಿಂದ 18ನೇ ತಮಾನದ ಅವಧಿಯಲ್ಲಿ ಬರುವ ದೇವೆಂದ್ರಮುನಿಯ ಬಾಲಗ್ರಹ ಚಿಕಿತ್ಸೆ, ಶ್ರೀಧರ ದೇವನ ವೈದ್ಯಾಮೃತ, ಸಾಳ್ವನ ವೈದ್ಯ ಸಾಂಗತ್ಯ, ಚೆನ್ನರಾಜನ ವೈದ್ಯಸಾರ ಸರಿಗ್ರಹ, ವೀರಭದ್ರರಾಜನ ಹಸ್ತಾಯುರ್ವೇದ, ನಂಜರಾಜನ ವೈದ್ಯಸಂಹಿತಾಸಾರರ್ಣವ, ಬ್ರಹ್ಮನ ವೈದ್ಯಕಂದ, ತಿಮ್ಮರಾಜಗೌಡನ ಸ್ತ್ರೀವೈದ್ಯ, ಶಾಂತಾಚಾರ್ಯನ ಮರಣ ಮಣಿದರ್ಪಣ (1700), ಕಿತ್ತೂರು ಶಂತ ವೀರರಾಚಿದೇವನ ಪಶುಸಂಜೀವನ (ಕಿ.ಶ. 1820–1885) ಮೊದಲಾದವರು ವೈದ್ಯಗ್ರಂಥಗಳನ್ನು ರಚಿಸಿದ್ದಾರೆ. ಕನ್ನಡದ ಈ ವೈದ್ಯಗ್ರಂಥ ಕರ್ತೃಗಳು, ಚರಕ, ಸುಶ್ರುತ, ವಾಗ್ಭಟ, ಶಾಙ್ಗಧರ, ಸಿದ್ದಸಾರ, ಧನ್ವಂತರಿ ಮೊದಲಾದವರು ಬರೆದಿರುವ ಉದ್ದಾಮ ವೈದ್ಯಗ್ರಂಥಗಳನ್ನು ಅಭ್ಯಸಿಸಿದ್ದಾರಲ್ಲದೆ, ಅವುಗಳನ್ನು ತಮ್ಮ ಗ್ರಂಥದಲ್ಲಿ ಯಥೋಚಿತವಾಗಿ ಬಳಸಿಕೊಂಡಿರುವುದಾಗಿ ಕೃತಿಗಳಿಂದ ತಿಳಿದುಬರುತ್ತದೆ. ಇನ್ನು ಅಭಿನವಚಂದ, ಬಾಚರಸ, ರಾಮಚಂದ್ರ, ಪದ್ಮಣ ಪಂಡಿತ ಮೊದಲಾದವರು ಅಶ್ವವೈದ್ಯವನ್ನು ಕುರಿತು ಬರೆದಿದ್ದಾರೆ. ರಾಮಚಂದ್ರನು ಶಾಲಿಹೋತ್ರನ ಸಂಸ್ಕೃತ ಅಶ್ವಶಾಸ್ತವನ್ನು ಭಾಷಾಂತರಿಸಿದ್ದಾನೆ ಉಳಿದ ಕೃತಿಗಳು ಬಹು ಮಟ್ಟಿಗೆ ಸಾರ ಸಂಗ್ರಹಗಳಾಗಿವೆ.

ಈಗಾಗಲೇ ವಿವರಿಸಿದಂತೆ ವೈದ್ಯದಲ್ಲಿ ಪುರುಷವೈದ್ಯ, ಸ್ತ್ರೀವೈದ್ಯ, ಬಾಲವೈದ್ಯ, ಗೋವೈದ್ಯ, ಅಶ್ವವೈದ್ಯ, ಹಸ್ತಿವೈದ್ಯ, ವಿಷವೈದ್ಯ ಇವು ಉಪಶಾಖೆಗಳೆಂದು ವಿಂಗಡಿಸಲ್ಪಟ್ಟಿವೆ. ಕಾಲಾಂತರದಲ್ಲಿ ಪ್ರತ್ಯೇಕವಾಗಿ ಪುರುಷವೈದ್ಯ, ಸ್ತ್ರೀವೈದ್ಯ, ಅಶ್ವವೈದ್ಯ, ಗಜವೈದ್ಯ ಕೃತಿಗಳಂತೆ ವಿಷವೈದ್ಯವೂ ಒಂದು ಪ್ರತ್ಯೇಕ ಮುಖ್ಯ ವಿಷಯವಾಗಿ ಚರ್ಚಿಸಲ್ಪಟ್ಟಿತು. ಅಂತಹ ವಿಷವೈದ್ಯದ ಚರ್ಚೆಯ ಮುಖ್ಯ ಉದ್ದೇಶವಾಗಿದ್ದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಈ ವಿಷಯದ ಕುರಿತಾಗಿ ರಚಿಸಲ್ಪಟ್ಟ 1. ಚಾವುಂಡರಾಯನ ಲೋಕೋಪಕಾರ (ಕ್ರಿ.ಶ.ಸು. 1025), 2. ಮಂಗರಾಜನ ಖಗೇಂದ್ರಮಣಿದರ್ಪಣ (ಕ್ರಿ. ಶ. ಸು. 1360) ಈ ಎರಡು ಕೃತಿಗಳು ಗಮನಾರ್ಹವಾದ್ದು. ಇಲ್ಲಿ ಮಂಗರಾಜನ ಖಗೇಂದ್ರಮಣಿದರ್ಪಣ ಕುರಿತು ಚರ್ಚಿಸಿಸಲಾಗಿದೆ.

ಮಂಗರಾಜನ ಖಗೇಂದ್ರಮಣಿದರ್ಪಣ (ಕ್ರಿ.ಶ.1360)

ದೂರದ ಗ್ರೀಸನಿಂದ ದಂಡೆತ್ತಿ ಬಂದ ಅಲೆಕ್ಸಾಂಡರ್‌ನ ಸೈನಿಕರನ್ನು ಹಾವು ಕಡಿತದ ಮರಣದಿಂದ ಭಾರತೀಯ ವಿಷ ವೈದ್ಯರು ರಕ್ಷಿಸಿದರೆಂಬುದು ಐತಿಹಾಸಿಕ ಸಂಗತಿ ನಮ್ಮ ನೆಲದ ಶ್ರೀಮಂತ ವಿಷವೈದ್ಯ ಪರಂಪರೆಯನ್ನು ಎತ್ತಿ ತೋರಿಸುತ್ತದೆ. ಇದಾದ ಬಳಿಕ ಸುಮಾರು ಸಾವಿರದ ನೂರು ವರ್ಷಗಳು ಸಂದು ಹೋದಮೇಲೆ ಆಗೊಬ್ಬ ಮಹಾತ್ಮ ನಮ್ಮ ಕನ್ನಡ ನೆಲದ ಇಂದಿನ ಚಿಕಮಂಗಳೂರ ಜಿಲ್ಲೆಯ ಮುಗುಳವಳ್ಳಿಯಲ್ಲಿ ಹುಟ್ಟಿಕೊಂಡ. ಅವನೇ ಮಂಗರಾಜ

ಅಥವಾ ಮಂಗರಸ. ವಿಶ್ವದ ಪ್ರಪ್ರಥಮ ವಿಷವೈದ್ಯ ಗ್ರಂಥ ಈತನ ಹೆಗ್ಗಳಿಕೆಯ ಕನ್ನಡ ಕೃತಿ. ಗ್ರಂಥದ ಹೆಸರು ಖಗೇಂದ್ರಮಣಿ ದರ್ಪಣ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಟ್ಟು ನಾಲ್ಕು ಜನ ಮಂಗರಸರು ಆಗಿ ಹೋಗಿದ್ದಾರೆ ಅವರಲ್ಲಿ 1.ಖಗೇಂದ್ರ ಮಣಿದರ್ಪಣ ಎಂಬ ವಿಷವೈದ್ಯ ಕೃತಿಯ ಕರ್ತೃವೇ ಮೊದಲನೆಯ ಮಂಗರಸ. 2. ಕವಿಮಂಗಾಭಿದಾನ ಎಂಬ ನಿಘಂಟುವಿನ ಕರ್ತೃ ಎರಡನೆಯ ಮಂಗರಸ ಅಥವಾ ಅಭಿನವ ಮಂಗರಾಜ. 3.ಸಮ್ಯಕ್ತ್ವ ಕೌಮುದಿ, ಜಯನೃಪ ಕಾವ್ಯ, ನೇಮಿಜಿನೇಶ ಸಂಗತಿ, ಮೊದಲಾದ ಕೃತಿಗಳನ್ನು ಬರೆದ ಕವಿ ಮೂರನೆಯ ಮಂಗರಾಜ (ಕಾಲ ಕ್ರ.ಶ. 1510) 4.ನಾಗಕುಮಾರ ಚರಿತೆಯನ್ನು ಬರೆದ ಮಂಗರಾಜ (18ನೇ ಶತಮಾನ) ನಾಲ್ಕನೆಯವನು. ಈ ಮೇಲಿನ ಮಂಗರಾಜರಷ್ಟೇ ಅಲ್ಲದೆ ಕ್ರಿ.ಶ.1450 ರ ಶ್ರವಣಬೆಳಗೊಳದ ಸಂಸ್ಕೃತ ಶಾಸನವನ್ನು ಬರೆದ ಇನ್ನೊಬ್ಬ ಮಂಗರಾಜನೂ ಸಹ ಇದ್ದನೆಂಬುದಾಗಿ ಆ ಶಾಸನದ ಅಂತ್ಯಭಾಗದಿಂದ ತಿಳಿದು ಬರುತ್ತದೆ.

ವಿಜಯನಗರದ ಸಾಮ್ರಾಟ ಒಂದನೆಯ ಹರಿಹರರಾಯನ (ಕ್ರಿ.ಶ. 1346) ಕಾಲದಲ್ಲಿ ಕನ್ನಡ ಕವಿಗಳು ಸಮೃದ್ಧವಾದ ಸಾಹಿತ್ಯ ಕೃಷಿ ಕೈಗೊಂಡಿದ್ದರು ಎಂಬುದು ಅನೇಕ ಇತಿಹಾಸಕಾರರ ಅಭಿಪ್ರಾಯ. ವಿಜಯನಗರಕ್ಕೆ ಮಾಂಡಳಿಕರಾಗಿದ್ದ ದೀವಳಿಗೆಯ ನಾಡಪ್ರಭು ಮುಗಳಿಪುರದ ಅರಸನಾದ ಮಂಗರಸನೇ ಈ ಕೃತಿಯನ್ನು ರಚಿಸಿದನೆಂಬುದು ಕೆಲವು ಇತಿಹಾಸಕಾರರ ಅಭಿಪ್ರಾಯ. ಮಂಗರಸ ಅಥವಾ ಮಂಗರಾಜ ಎಂದು ಕರೆಯಲ್ಪಡುವ 'ಖಗೇಂದ್ರಮಣಿ ದರ್ಪಣ'ದ ಕರ್ತೃವಿನ ಕಾಲವನ್ನು ಕವಿ ಚರಿತೆ ಕಾರರು ಕ್ರಿ.ಶ.1360 ಎಂಬುದಾಗಿ ನಿರ್ಣಯಿಸಿದ್ದಾರೆ. ಇವನು ಜೈನ ಕವಿಯಾಗಿದ್ದು ಹೊಯ್ಸಳ ರಾಜ್ಯದಲ್ಲಿಯ ದೇವಳಿಗೆ ನಾಡಿನ ಮುಖ್ಯ ಪಟ್ಟಣವಾದ ಮುಗುಳಿಪುರದ ದೊರೆಯಾಗಿದ್ದನು. ಈತನ ಗುರು ಪೂಜ್ಯಪಾದ ಮುನಿ. ಈತನಿಗೆ 'ಸುಲಲಿತ ಕವಿ ಪಿಕವಸಂತ' 'ವಿಭುವಂಶ ಲಲಾಮ' 'ಕವಿಜನೈಕಮಿತ್ರ' 'ಅಗಣಿತಗುಣನಿಳಯ' 'ಅಖಿಳವಿದ್ಯಾಬಲನಿಧಿ' 'ಪಂಚಗುರುಪದಾಂಬುಜಭೃಂಗ' ಎಂಬ ಬಿರುದುಗಳಿದ್ದವು. ಸಂಸ್ಕೃತದಲ್ಲಿ 'ಕಾಶ್ಯಪ ಸಂಹಿತೆ' ಇರುವಂತೆ ಕನ್ನಡದಲ್ಲಿ ಒಂದು ವಿಷಚಿಕಿತ್ಸಾ ಗ್ರಂಥವು ಇರಬೇಕೆಂದು ಆಶಿಸಿ ಮಂಗರಾಜನು 'ಖಗೇಂದ್ರಮಣಿ ದರ್ಪಣಂ' ಗ್ರಂಥವನ್ನು ಬರೆದಿದ್ದಾನೆ. ಕಾಶ್ಯಪ ಸಂಹಿತೆಗೆ 'ಗರುಡ ಪಂಚಾಕ್ಷರೀ ಕಲ್ಪಂ' ಎಂಬ ಇನ್ನೊಂದು ಹೆಸರಿದ್ದು, ಅದು ವಿಷಚಿಕಿತ್ಸೆಯನ್ನು ವಿಶದೀಕರಿಸುತ್ತದೆ. ಅಂತೆಯೇ 'ಖಗೇಂದ್ರಮಣಿ ದರ್ಪಣಂ' ಕೃತಿಯಲ್ಲಿ ವಿಷವೈದ್ಯಶಾಸ್ತ್ರದ ವಿವರವಾದ ನಿರೂಪಣೆಯಿದೆ.

1942ರಲ್ಲಿ 'ಖಗೇಂದ್ರಮಣಿ ದರ್ಪಣಂ' ಕೃತಿಯನ್ನು ಸಂಪಾದಿಸಿದ ಮದ್ರಾಸ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳಾಗಿದ್ದ, ಎ.ವೆಂಕಟರಾವ್ ಹಾಗೂ ಪಂ. ಎಚ್. ಶೇಷಯ್ಯಂಗಾರ್ ಅವರು ಗ್ರಂಥದ ಪೀಠಿಕಾ ಪ್ರಕರಣ ಮತ್ತು ಆಶ್ವಾಸಗಳ ಅಂತ್ಯದಲ್ಲಿರುವ ಗದ್ಯವನ್ನು ಅನುಸರಿಸಿ 'ಮಂಗವಿಭು' 'ಮಂಗರಾಜ' 'ಮಂಗ' 'ಮಂಖಣ' 'ಮಂಗಣ' ಎಂಬ ಹೆಸರುಗಳೂ ಇದ್ದವೆಂದು ಈ ಗ್ರಂಥದಿಂದಲೇ ತಿಳಿದುಬರುತ್ತದೆ. ಹೊಯ್ಸಳ ದೇಶದ ಮುಗಳಿಪುರದರಸು ಮಂಗವಿಭು ಆತನ ಧರ್ಮಪತ್ನಿ 'ಪೆರ್ಮಲೆ'. ಇವರಿಬ್ಬರ ಪುತ್ರನಾದ ಮಂಗರಾಜನೇ 'ಖಗೇಂದ್ರಮಣಿ ದರ್ಪಣಂ'ನ ಕರ್ತೃ. ಈತನ ಪತ್ನಿ 'ಕಾಮಲತೆ' ಎಂದು ಅಭಿಪ್ರಾಯಪಡುತ್ತಾರೆ. ನಂತರ 2004ರಲ್ಲಿ 'ಖಗೇಂದ್ರಮಣಿ ದರ್ಪಣಂ' ಗ್ರಂಥವನ್ನು ಸಂಪಾದಿಸಿದ ಬಿ.ಎಸ್.ಸಣ್ಣಯ್ಯ ಅವರು ಇದೇ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಾರೆ.

ಖಗೇಂದ್ರ ಎಂದರೆ ಗರುಡ. ಅವನು ಪಕ್ಷಿರಾಜ ಮತ್ತು ಸರ್ಪಶತ್ರು, ವಿಷಕ್ಕೆ ಗರುಡನು ವಿಶಿಷ್ಟವಾದ ಮದ್ದು. ಕವಿಯು ಕೃತಿಯಲ್ಲಿ ಪದ್ಯಗಳ ಮೂಲಕ ವಿವಿಧ ರೀತಿಯ ವಿಷಗಳು ಹಾಗೂ ಅವುಗಳಿಗೆ ವಿಷನಿದಾನ ಪದ್ಧತಿಯನ್ನು ತಿಳಿಸಿಕೊಡುತ್ತಾನೆ. ವಿಷನಿದಾನ ಚಿಕಿತ್ಸಾ ವಿವರಗಳನ್ನೊಳಗೊಂಡ 'ಖಗೇಂದ್ರಮಣಿ ದರ್ಪಣ'ವು ಆಯುರ್ವೇದ ಸಾಹಿತ್ಯದಲ್ಲಿಯೇ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ. ಇಂತಹ ಅಪರೂಪದ ಗ್ರಂಥದಲ್ಲಿ ಅನೇಕ ರೀತಿಯಿಂದ

ಮನುಷ್ಯನಿಗೆ ಆಗುವ ವಿಷಸ್ಪರ್ಶ ಹಾಗೂ ಅವುಗಳ ಪರಿಹಾರಗಳ ಕುರಿತು ಚರ್ಚೆಯಿದೆ. ಪ್ರಸ್ತುತ ಗ್ರಂಥದಲ್ಲಿ 16 ಅಧಿಕಾರಗಳಿವೆ. ಛಂದಸ್ಸಿನ ದೃಷ್ಟಿಯಿಂದ ನೋಡಿದರೆ ಕೃತಿಯುದ್ದಕ್ಕೂ ಖ್ಯಾತ ಕರ್ಣಾಟಕ ವೃತ್ತಗಳು, ಮಾಲಿನಿ ವೃತ್ತ, ಶಶಿಕಾಂತ ವೃತ್ತ, ಮಲ್ಲಿಕಾಮಾಲೆ, ಕಂದಪದ್ಯಗಳು, ವಚನ ಹಾಗೂ ಗದ್ಯವವನ್ನು ಬಳಸಿಕೊಂಡಿದ್ದಾನೆ. ಗ್ರಂಥಾರಂಭದಲ್ಲಿ ವಾಡಿಕೆಯಂತೆ 23ನೆಯ ತೀರ್ಥಂಕರನಾದ ಶ್ರೀ ಪಾರ್ಶ್ವನಾಥ, ಯಕ್ಷಿ ಪದ್ಮಾವತಿ, ಪಂಚಪರಮೇಷ್ಠಿಗಳು ಹಾಗೂ ಪೂರ್ವಸೂರಿಗಳನ್ನು ವಂದಿಸಿದ್ದಾನೆ.

ಅಂದಿನ ಸಂದರ್ಭದಲ್ಲಿ ಕವಿಗಳೆಲ್ಲ ಕೆಲಸಕ್ಕೆ ಬಾರದ ಕೃತಿಗಳನ್ನು ರಚಿಸುವುದರಲ್ಲಿ ನಿರತರಾಗಿದ್ದ ಸಂದರ್ಭದಲ್ಲಿ ತಾನು ಮಾತ್ರ ಲೋಕಕಲ್ಯಾಣಾರ್ಥವಾಗಿ ವಿಷ ಚಿಕಿತ್ಸೆಯ ಕಾವ್ಯವೊಂದನ್ನು ರಚಿಸುತ್ತಿರುವುದಾಗಿ ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ. ಸಮಸ್ತ ವಿಷಪ್ರಕಾರ, ವಿಷವೇಗ, ವಿಷ ಲಕ್ಷಣ ಮತ್ತು ವಿಷಚಿಕಿತ್ಸೆಯ ಒಂದು ವಿಶೇಷ ಗ್ರಂಥ ರಚಿಸಲು ಹೊರಟಿದ್ದೇನೆ ಎನ್ನುವ ಕವಿಯ ಸರಳ, ಸೊಲ್ಲು ಓದುಗರ ಹೃದಯ ಗೆಲ್ಲುವಂಥದ್ದು. ಮೂಲ ಪದ್ಮ ಹೀಗಿದೆ.

"ಮರನಂ ಗಾಳಿಯಂ ಧೂಳಿಯಂ ರಜನಿಯಂ ನೀರಾಟಂ ಬೇಟಮಂ
ಸುರೆಯಂ ಸೂಳೆಯರಂ ವಿಟಾಟವಿಕರಂ ಕೊಂಡಾಡಿ ಬೆಂಡಾಗದೀ
ಧರೆಯೊಳ್ ಸರ್ವಜನೋಪಕಾರಮೆನಲೀ ಮಂತ್ರೌಷಧವ್ರಾತಮಂ
ನಿರುತಂ ಭಾವಿಸಿ ಪೇಳ್ದ ಮಾನವನೆ ತಾಂ ದೇವಂ ಧರಾಚಕ್ರದೊಳ್"[1]

ಅಂದಿನ ಪ್ರಚಲಿತ ಸಂದರ್ಭದಲ್ಲಿ ಪಂಡಿತಮಂಡಳಿಯಿಂದ ಮಹಾಕವಿಗಳೆಂದು ಕರೆಯಿಸಿಕೊಳ್ಳಬೇಕೆಂಬ ಹುಚ್ಚು ಕೀರ್ತಿಯ ಹಂಬಲದಲ್ಲಿ ಅಗತ್ಯವಿಲ್ಲದಿದ್ದರೂ ಅಷ್ಟಾದಶವರ್ಣನೆಗಳನ್ನು ತಂದು ಕಾಮನನ್ನು, ಸುಂಟರ ಗಾಳಿಯನ್ನು, ಧೂಳಿಯನ್ನು, ಬೆಳದಿಂಗಳನ್ನು, ಜಲಕ್ರೀಡೆ, ಮದನೋತ್ಸಾಹ, ಮದ್ಯ, ಸೂಳೆ, ವಿಟರು, ಕಿರಾತರು ಮುಂತಾದವರನ್ನು ವರ್ಣಿಸುವ ಅನೇಕ ಕವಿಗಳಿದ್ದರು. ಅಂಥವರ ಮಧ್ಯದಲ್ಲಿ ಆದರೆ ತಾನು ಲೋಕೋಪಕಾರಕ ವಿಷಚಿಕಿತ್ಸೆಯನ್ನು ಕುರಿತು ವಿವರಿಸುತ್ತೇನೆ. ಎಂಬ ಕವಿಯ ಉದಾತ್ತತೆ ಕೃತಿಯ ಆರಂಭದಲ್ಲಿದೆ. ಅಂದಿನ ಪ್ರಚಲಿತ ಸಂದರ್ಭದ ಸಾಹಿತ್ಯಕ ಧೋರಣೆಯನ್ನು ಮೀರಿದ ಹದಿನಾಲ್ಕನೆಯ ಶತಮಾನದ ಬಂಡಾಯ ಸಾಹಿತಿ ಮಂಗರಸ ಎಂದರೆ ತಪ್ಪಾಗಲಾರದು. ಆತನ ಸಾಹಿತ್ಯ ಕಬ್ಬಿಣದ ಕಡಲೆಯಲ್ಲ, ಕಡಲೆಬೇಳೆ ಕೋಸಂಬರಿಯಷ್ಟು ಸರಳ. ಮಂಗ ಎಂದರೆ ಹಳಗನ್ನಡ, ತಮಿಳು, ತೆಲುಗಿನಲ್ಲಿ 'ಸುಂದರ' ಎಂಬರ್ಥವಿದೆ. ಹಾಗೆಯೇ ಅವನ ಹೆಸರಿನಂತೆಯೇ ಕೃತಿ ಖಗೇಂದ್ರಮಣಿ ದರ್ಪಣವೂ ಕೂಡ ಅಷ್ಟೇ ಸರಳ ಸುಂದರವೆಂದುಬುದು ಆತನ ಸರಳ ಮಾತಿನಲ್ಲೇ ಅರಿಯಬಹುದು. 'ರಚಿತಮಾಯ್ತು ಮಂಗಪ್ರಭುವಿಂ ಪ್ರಣುತಂ ಜನಹಿತಮೆನೆ ಧಾರಿಣಿಯೊಳಿದಂ ಮೆಚ್ಚದಿರ್ಪ ಸಜ್ಜನರಹರೇ' ಎಂಬ ಮಾತಿನಂತೆ ಖಗೇಂದ್ರಮಣಿದರ್ಪಣ ಲೋಕ ಕಲ್ಯಾಣಕಾರಕ ಸರ್ವಜನಪ್ರಿಯ ಕೃತಿ.

ಸಂಸ್ಕೃತ ಸಾಹಿತ್ಯದಲ್ಲಿಯೂ ಇಲ್ಲದ ಕನ್ನಡಕ್ಕೆ ಅಪೂರ್ವವಾದ ಖಗೇಂದ್ರಮಣಿದರ್ಪಣದಲ್ಲಿ ಒಟ್ಟು ಹದಿನಾರು ಅಧ್ಯಾಯಗಳಿದ್ದು ಅವುಗಳಲ್ಲಿ ಒಟ್ಟು 1500 ಪದ್ಯಗಳಿವೆ. ಅವುಗಳಲ್ಲಿ ಸ್ಥಾವರ, ಜಂಗಮ, ಕೃತ್ರಿಮ ವಿಷಗಳ ಸವಿಸ್ತಾರ ವಿವರವಿದೆ. ಈ ಕೃತಿಯು 955 ಸಸ್ಯ ನಾಮಗಳ ಅಪೂರ್ವ ಆಕರವಾಗಿದ್ದು, ಇಂದು ಈ ಸಸ್ಯ ನಾಮಗಳನ್ನು 438 ಲ್ಯಾಟಿನ್ ಭಾಷೆಯ ಹೆಸರಿನಲ್ಲಿ ಗುರುತಿಸಲಾಗಿದೆ. ಇವು ಒಟ್ಟು 115 ಸಸ್ಯ ಕುಟುಂಬಗಳಿಗೆ ಸೇರುತ್ತವೆ. ಈ ಕೃತಿಯಲ್ಲಿ ಒಟ್ಟು 84 ಬಗೆಯ ಪ್ರಾಣಿ ವರ್ಗದ ವಿವರವಿದೆ. 34 ಸಸ್ತನಿಗಳು, 23 ಬಗೆಯ ಉರಗ ಜಾತಿ, 6 ಬಗೆಯ ಹಕ್ಕಿ ಮತ್ತು 16 ಬಗೆಯ ಕೀಟ ಹುಳಗಳ ವೈವಿಧ್ಯ ವಿವರವಿದೆ. ವಿಜ್ಞಾನಿಗಳೂ ತಲೆದೂಗುವ ವೈಜ್ಞಾನಿಕ ವರ್ಗೀಕರಣ (ಟಾಕ್ಸಾನಾಮಿ) ವಿಧಾನ. ಏರೇಸಿ ಎಂಬ ಸಸ್ಯಕುಟುಂಬ ಸಸ್ಯವಿಜ್ಞಾನಗಳ ವರ್ಗೀಕರಣ. 650 ವರ್ಷದ ಹಿಂದೆಯೇ ಈ ಕುಲಬಂಧುಗಳನ್ನೆಲ್ಲಾ ಕವಿ ಮಂಗರಸ ಒಂದೇ ಕಡೇ ವರ್ಣಿಸಿದ್ದು ವಿಶೇಷ. ಕೆಸವಿ, ಸೂರಣ, ಹಸ್ತಿಕರ್ಣಿ ಎಂಬ ಮೂರು ಸಸ್ಯಗಳು ಏರೇಸೀ ಕುಲದವು. ಕುಟಜ ದ್ವಂದ್ವ ಎಂಬಲ್ಲಿ ಎಪೊಸೈನೇಸೀ ಕುಲದ ಎರಡು ಸಸ್ಯ ಇಂದಿಗೂ

ಗುರುತಿಸಿಕೊಳ್ಳುತ್ತವೆ. ಇವುಗಳಿಗೆ ಕೊಡಸಿಗೆ ಮತ್ತು ಬೆಪ್ಪಾಲೆ ಎಂಬ ಪದ ಬಳಸಿದಾತ ಮಂಗರಸ. ಮಂಗರಾಜನ ದೃಷ್ಟಿಯಲ್ಲಿ ಮೋಕ್ಷ ಎಂದರೆ ಅನಾರೋಗ್ಯದಿಂದಾದ ತೊಂದರೆಗಳಿಂದ ಪಾರಾಗಿ ಆರೋಗ್ಯಕರವಾದ ಸಂತೋಷಪೂರ್ಣ ಜೀವನ ನಡೆಸುವುದು.

"ನರರ್ಗರುಜತೆ ಭೇಷಜಂ
ದರುಜತೆಯಿಂ ದೇಹ ದೇಹದಿಂದಂ ಜ್ಞಾನಂ
ಪರಮಜ್ಞಾನದೆ ಮೋಕ್ಷಂ
ದೊರೆಕೊಳ್ಳುವುದೆಂದು ಪೇಳ್ವೆಂ ಬೇಷಜಮಂ"[2]

ವೈದ್ಯೋಪಚಾರದಿಂದ ನರರಿಗೆ ಯಾವುದೇ ತೊಂದರೆಯಿರುವುದಿಲ್ಲ. ಅಂತಹ ಶರೀರದಿಂದ ಪರಮ ಜ್ಞಾನಾರ್ಜನೆಯಾಗುತ್ತದೆ. ಆ ಪರಮ ಜ್ಞಾನದಿಂದಲೇ ಮೋಕ್ಷ ಪ್ರಾಪ್ತಿಯಾಗುತ್ತದೆ ಎಂದು ಹೇಳುತ್ತಾನೆ. ಶ್ರೀಜಿತೇಂದ್ರಿಯರಾದ ದೇವಾದಿದೇವತೆಗಳಿಗೆ ನಮಸ್ಕರಿಸಿ, ಸ್ಥಾವರ ವಿಷಗಳನ್ನು ಕುರಿತು ವಿಶ್ಲೇಷಿಸುತ್ತಾನೆ. ಇದರಲ್ಲಿ ಭದ್ರಮುಸ್ತೆ, ವತ್ಸನಾಭ, ಬಲಾಹ, ಪುಷ್ಕರಶರ, ಹರಿದ್ರಾ, ಶೃಂಗೀಕುಲ, ಮೇಷಶೃಂಗೀ, ಹಾಳಾಹಳ, ಕೌಸ್ತುಕ, ರಕ್ತಶೃಂಗಿ, ಮಧುಪಾಕ, ಇಂದ್ರವಜ್ರ, ಕರ್ನಾಟಕ ಶೃಂಗೀ, ಮಧುರ, ಕ್ರೌಂಚ, ಹರೀತ, ಅರ್ಕ, ಕಾಳಕೂಟ, ಪುಂಡರೀಕ, ಸಂಕೋಚ, ಗಾಳವ, ಅಂಜನ, ರೋಹಿಣಿ, ಏಕವೀರ ಎಂಬ ಇಪ್ಪತ್ತೈದು ಬಗೆಯ ವಿಷಭೇದಗಳಿವೆ. ಇದರಲ್ಲಿ ಮುಸ್ತೆ, ವತ್ಸನಾಭ, ಶೃಂಗೀ, ಕಾಳಕೂಟ ಹಾಗೂ ಸಂಕೋಚ ಎಂಬ ಐದು ವಿಷಗಳು ಅತೀ ಕ್ರೂರವಾದವುಗಳು. ಇನ್ನುಳಿದ ಇಪ್ಪತ್ತು ವಿಷಗಳು ಮಧ್ಯಮ ಮತ್ತು ಅಧಮವಾಗಿವೆ. ಈ ವಿಷಗಳು ತಗುಲಿದಾಗ ಅತಿಸಾರ, ಮೂರ್ಛೆ, ದಾಹ, ಬುದ್ಧಿಭ್ರಮಣೆ, ಭ್ರಾಂತಿ, ಹೃದಯಶೂಲೆ, ತಾಪ, ಬಲಹೀನತೆ, ಕಣ್ಣುಮಂಜು, ಅಸಹಜ ಶರೀರ ಪ್ರಕೃತಿ, ಗದ್ಗದ ಧ್ವನಿ, ನಿಶ್ಚಲತೆ, ಕೆಮ್ಮು, ರಕ್ತವಮನ, ಬೆವರುವುದು ಮುಂತಾದ ಲಕ್ಷಣಗಳು ಉಂಟಾಗುತ್ತವೆ. ಹೀಗೆ ತಗುಲಿದ ವಿಷಗಳ ಮೂಲ ಗುಣಗಳನ್ನರಿತು ಔಷಧ ಮತ್ತು ಮಂತ್ರಗಳಿಂದ ಉಪಚರಿಸಬೇಕೆಂದು ಕವಿ ತಿಳಿಸುತ್ತಾನೆ. ಪ್ರಕೃತಿಯಲ್ಲಿ ಸ್ಥಾವರ ಜಂಗಮ ಕೃತ್ರಿಮ ಎಂಬ ಮೂರು ಬಗೆಯ ವಿಷಪ್ರಕಾರಗಳಿವೆಯೆಂದು ಹೇಳುವ ಮಂಗರಾಜನು ಅವುಗಳನ್ನು ಕುರಿತು ವಿವರವಾಗಿ ಹೇಳುವಾಗ ಮದ್ಯ, ಕೀಟ, ಕುಧಾನ್ಯ, ತಾಂಬೂಲ (ತಂಬಾಕು, ನಿಕೋಟಿನ್ ಮೊದಲಾದ ವಿಷವಸ್ತು), ಕನಕ ಮೊದಲಾದ ಹತ್ತು ರೀತಿಯ ಜೀವಿ ಮತ್ತು ವಸ್ತು ಮೂಲದಿಂದ ವದಗಿ ಬರುತ್ತದೆ ಎಂದಿದ್ದಾನೆ.

12ನೇ ಅಧ್ಯಯದಲ್ಲಿ 18 ಬಗೆಯ ಇಲಿ, ಹೆಗ್ಗಣಗಳನ್ನು ಹೆಸರಿಸಿ ಅವುಗಳ ವಿಷಕ್ಕೆ ತಕ್ಕ ಪರಿಹಾರಗಳನ್ನು ಸೂಚಿಸಿದ್ದಾನೆ. 13ನೇ ಅಧ್ಯಾಯದಲ್ಲಿ ತೋಳ, ಕರಡಿ, ನಾಯಿ, ಸೀಳುನಾಯಿ, ಹಂದಿ, ಬೆಕ್ಕು, ಹಲ್ಲಿ, ಮೊಸಳೆ, ಏಡಿ, ಕಪ್ಪೆ, ಜಿಗಣೆ, ದುಂಬಿ, ಜೇನುನೊಣ, ಕಣಜೀರಿಗೆ, ಕೆಂಜಗ ಮೊದಲಾದವುಗಳ ಕಡಿತಕ್ಕೆ ಪ್ರತಿಯೊಂದಕ್ಕು ತಕ್ಕುದಾದ ವಿಷ ಪರಿಹಾರಕ ಕ್ರಮಗಳನ್ನು ಸೂಚಿಸಲಾಗಿದೆ. ಹಾವುಗಳಲ್ಲಿ ಎಂಟು ಬಗೆಯ ವಿಷಸರ್ಪವಿದ್ದು ಅವುಗಳಲ್ಲಿ ಅತ್ಯಂತ ಘೋರ ವಿಷದ ಹಾವುಗಳಾದ ಮಂಡಲ ಹಾವು ಮತ್ತು ಅವುಗಳಲ್ಲಿ ಪ್ರಕಾರಗಳು ಅವುಗಳ ವಿಷದಿಂದಾಗುವ ಪರಿಣಾಮ; ಚಿಕಿತ್ಸೆಗಳು, ಔಷಧಿಗಳು, ಆಹಾರ ವಿಧಾನ ಮೊದಲಾದವುಗಳ ಕುರಿತು ದೀರ್ಘ ವಿವರಣೆ ನೀಡಿದ್ದಾನೆ.

"ನೀರಿಂದೆ ಬಿಳಿಯ ಗುಂಜೆಯ
ಬೇರಂ ಬಜೆವೆರಸು ರಾಗದಿಂ ಕುಡಿಸಲೊಡಂ
ದಾರುಣ ವಿಷದಗ್ಧಂ ಸಂ
ಸಾರದೆ ಪೆರತೇಂ ವಿಷಪರಿಹಾರಮದಕ್ಕುಂ"[3]

ಎಂದರೆ ಬಿಳಿಗುಲಗಂಜಿ ಬೇರು ಹಾಗೂ ಬಜೆ ಬೇರನ್ನು ನೀರಲ್ಲಿ ತೇಯ್ದು ಆ ರಸವನ್ನು ಹಾವು ಕಚ್ಚಿದ ವ್ಯಕ್ತಿಗೆ ಕುಡಿಸಲಾಗಿ ಎಂತಹ ಭಯಂಕರ ವಿಷವಾಗಿದ್ದರೂ ಅದು ಪರಿಹಾರವಾಗುತ್ತದೆ. ಅದೇ ರೀತಿ ಹೇರೀಚಲ ಹೂವನ್ನು

ಮಜ್ಜಿಗೆಯಲ್ಲಿ ಅರೆದು, ಮೂಗಿನ ಹೊರಳೆಯಲ್ಲಿ ಹನಿಹನಿಯಾಗಿ ಬಿಟ್ಟರೆ ಎಂತಹ ಘೋರ ಹಾವಿನ ವಿಷವಾದರೂ ಪರಿಹಾರವಾಗುತ್ತದೆ ಎಂದಿದ್ದಾನೆ ಮಂಗರಾಜ. ಇನ್ನೂ ಮುಂದೆ ಹೋಗಿ ಹಾವು ಕಚ್ಚಿದರೆ ಹಾವಿನ ವಿಷದ ಭಾದೆ ಮನುಷ್ಯನ ದೇಹಕ್ಕೆ ತಟ್ಟದಂತೆ ದೇಹವನ್ನೇ ಸಂಜೀವಿನಿಯಾಗಿಸಿಕೊಳ್ಳುವ ತಂತ್ರವೂ ಮಂಗರಾಜನಲ್ಲಿದೆ. ಕಿರು ತೆಂಗಿನ ಬೇರನ್ನು ಕರಿಯಕ್ಕಿಯ ರಸವನ್ನು ಆಡಿನ ಮಜ್ಜಿಗೆಯಲ್ಲಿ ಕುದಿಸಿ ಸಿದ್ಧಪಡಿಸಿದ ಅಂಬಲಿಯನ್ನು ನಿರಂತರವಾಗಿ ಉಣ್ಣುತ್ತ ಬಂದ ವ್ಯಕ್ತಿಗೆ ಹಾವು ಕಚ್ಚಿದರೆ ಹಾವು ತಾನೇ ಸಾಯುತ್ತದೆ ಎಂಬ ಸೋಜಿಗವನ್ನುಂಟು ಮಾಡುವ ಎಷ್ಟೋ ವಿಷಯಗಳನ್ನು ಮಂಗರಾಜ ತನ್ನ ಕೃತಿಯಲ್ಲಿ ಹೇಳಿದ್ದಾನೆ. ಈ ಕೃತಿಯ ಹನ್ನೊಂದನೇ ಅಧ್ಯಾಯವಾದ ವೃಶ್ಚಿಕ ಪ್ರಕರಣದಲ್ಲಿ ಇಂದಿನ ಆಧುನಿಕ ಜೀವವಿಜ್ಞಾನಿಗಳೂ ಗಮನಿಸಲಾರದ ಅರುಣ, ಹೇಮಾಭ, ಪೀತ ಮುಂತಾದ 13 ಬಗೆಯ ಚೇಳುಗಳನ್ನು ಹೆಸರಿಸಿ ಭಿನ್ನ ಭಿನ್ನ ಜಾತಿಯ ಚೇಳುಗಳ ವಿಷಕ್ಕೆ ಭಿನ್ನ ಭಿನ್ನ ಔಷದೋಪಚಾರಗಳನ್ನು ಹೇಳಿದ್ದಾನೆ.

ಮನುಷ್ಯನಿಗೆ ಘಾತಕವಾಗಬಹುದಾದ ವಿಷಗಳನ್ನು ಮೂರು ವಿಧವಾಗಿ ವಿಂಗಡನೆ ಮಾಡಿದ್ದಾನೆ. 1.ಸ್ಥಾವರ ವಿಷ: ತರಕಾರಿ, ಧಾನ್ಯ, ಬೀಜ ಮುಂತಾದ ಪದಾರ್ಥಗಳಿಂದ ಉಂಟಾಗಬಹುದಾದ ವಿಷ. 2.ಜಂಗಮ ವಿಷ: ಹಾವು, ಚೇಳುಗಳಿಂದ ಹಾಗೂ ಮನುಷ್ಯ ಮುಂತಾದ ಜೀವಿಗಳಿಂದ ಉಂಟಾಗಬಹುದಾದ ನಂಜು. 3.ಕೃತ್ರಿಮ ವಿಷ: ಮನುಷ್ಯ ಅತಿಯಾಗಿ ಔಷಧಗಳನ್ನು ಸೇವಿಸುವುದರಿಂದ ಆಗಬಹುದಾದ ವಿಷ. ಹಾಗೂ ಇವುಗಳಿಂದಾದ ವಿಷಕ್ಕೆ ವಿಷನಿದಾನ ಪದ್ಧತಿಗಳನ್ನು ಚರ್ಚಿಸಿದ್ದಾನೆ. ಸ್ಥಾವರ ವಿಷಗಳಲ್ಲಿ ಕಹಿ ಹೀರೆ, ಸೋರೆಕಾಯಿ, ಉಮ್ಮತ್ತಿ (ಮದಗುಣಕಿ) ವಿಷ, ಎಕ್ಕೆಹಾಲು, ಕಳ್ಳಿಹಾಲು, ಪಾದರಸ, ಗಂಧಕ, ಅಭ್ರಕ, ಬಜೆ, ಮೆಣಸು, ಇಂಗು, ನಸುಗುನ್ನಿ, ತುರ್ಚಿ, ಗೇರುಹಣ್ಣು, ಹಂದಿಮುಳ್ಳುಗಳಿಂದ ವಿಷ ಹಾಗೂ ವ್ಯತಿರಿಕ್ತ ಆಹಾರ ಸೇವನೆಯಿಂದ ಆಹಾರ ವಿಷವಾಗಿ ಪರಿಣಮಿಸಿದಾಗ ಗಾಂಜಾ, ಮದ್ಯ, ಮಾಂಸಗಳು ವಿಷಗಳಾಗಿ ಪರಿಣಮಿಸಿದಾಗ ನೀಡಬೇಕಾದ ಹಲವಾರು ಬಗೆಯ ಚಿಕಿತ್ಸೆಗಳು ಹಾಗೂ ಔಷಧಿಗಳ ಕುರಿತು ತಿಂಬಾ ವಿಸ್ತೃತವಾಗಿ ವಿವರಿಸಿದ್ದಾನೆ.

ಹಾವು, ಜಿಂಕೆ, ಚೇಳು, ಕೀಟಗಳು, ಮದ್ಯ, ಕೆಟ್ಟಿರುವ ಧಾನ್ಯ, ತಾಂಬೂಲ, ಕಣಕ, ಇಲಿ, ನಾಯಿ, ಹುಲಿ, ಹಲ್ಲಿ, ಓತಿ, ಮೊಸಳೆ, ಮೀನು ಮುಂತಾದ ಜಲಚರಗಳು, ನೊರಜು, ಗುಂಗುರು, ದುಂಬಿ, ಪಕ್ಷಿಸಮೂಹ ಇರುವ ಮೊದಲಾದವುಗಳಿಂದ ವಿಷ ತಗುಲುವ ಸಾಧ್ಯತೆಗಳಿರುತ್ತವೆ. ಹೀಗೆ ತಗುಲಿದ ವಿಷವನ್ನು ಉಪಚರಿಸಲು ಬೇಕಾದ ಮೂಲಿಕೆಗಳನ್ನು ಸಂಗ್ರಹಿಸುವಾಗ ಬಹು ಎಚ್ಚರಿಕೆಯಿಂದ ಇರಬೇಕೆಂದು ತಿಳಿಸುತ್ತ, ದೇವಾಲಯಗಳಲ್ಲಿ, ಬೂದಿಯಲ್ಲಿ, ಮೂಳೆ ಚರ್ಮಗಳಡೆಯಲ್ಲಿ ದೊಡ್ಡರಸ್ತೆಗಳಲ್ಲಿ, ರುದ್ರಭೂಮಿಯಲ್ಲಿ, ಹೇಸಿಗೆಯಲ್ಲಿ, ಊರಿನಲ್ಲಿಯ ಮಲಮೂತ್ರ ವಿಸರ್ಜನೆಯ ಪ್ರದೇಶಗಳಲ್ಲಿ ಹುಳುಗಳು ತಿಂದ ಕಡೆಗಳಲ್ಲಿ ಬೆಳೆದ ಮರ, ಬಳ್ಳಿ, ಪೊದರುಗಳಲ್ಲಿ ಔಷಧಿ ಬೇರುಗಳನ್ನು ಸಂಗ್ರಹಿಸಬಾರದು ಎಂದು ಹೇಳುತ್ತಾನೆ.

ಇನ್ನು ವಿಷದಿಂದ ಬಾಧಿತನಾದವನನ್ನು ಕಾಟಾಚಾರಕ್ಕಲ್ಲದೇ ಅತಿ ಪ್ರೀತಿಯಿಂದ ಉಪಚರಿಸಬೇಕೆಂದು ತಿಳಿಸುತ್ತಾನೆ. ವಸಂತಕಾಲದಲ್ಲಿ ಹೂವನ್ನೂ, ಗ್ರೀಷ್ಮ ಋತುವಿನಲ್ಲಿಯೂ ಕಾಯಿಯನ್ನೂ, ವರ್ಷ ಋತುವಿನಲ್ಲಿ ತೊಗಟೆಯನ್ನೂ, ಶರತ್ಕಾಲದಲ್ಲಿ ಬೇರನ್ನೂ, ಹೇಮಂತ ಋತುವಿನಲ್ಲಿ ಹಣ್ಣುಗಳನ್ನೂ, ಶಿಶಿರ ಋತುವಿನಲ್ಲಿ ಎಲೆಗಳನ್ನೂ ಸಂಗ್ರಹಿಸಬೇಕು ಎಂದು ಹೇಳುತ್ತಾನೆ. ಇದಕ್ಕೆ ಕಾರಣ ಆಯಾಯ ಕಾಲದಲ್ಲಿ ಮೂಲಿಕೆಗಳು ಯಥೇಚ್ಚವಾಗಿ ದೊರೆಯುತ್ತವೆ. ಅಲ್ಲದೇ ಆಯಾ ಋತುಗಳಿಗೆ ಅನುಗುಣವಾಗಿ ಸಸ್ಯಗಳ ಬೆಳವಣಿಗೆ ಇರುವುದರಿಂದ ಅವುಗಳಿಗೆ ಯಾವುದೇ ತೊಂದರೆಯಾಗದಂತೆ ಸಂಗ್ರಹಿಸುವುದು ಎಂದು ಸಲಹೆ ನೀಡುತ್ತಾನೆ ಮಂಗರಾಜ. ಮುಂದುವರೆದು ಉತ್ತಮ ಪುರುಷರಿಗೆ ಮಾತ್ರ ಈ ಶಾಸ್ತ್ರವನ್ನು ಬೋಧಿಸುವುದು. ದುರ್ಜನರಿಗೆ ಇದರ ಗಂಧವೂ ಸೋಕಬಾರದೆಂದು ಹೇಳುತ್ತಾನೆ.

14ನೇ ಅಧ್ಯಾಯದಲ್ಲಿ ಮಾಟ, ಮದ್ದುಗಳಿಂದಾದ ವಿಷ ಪರಿಹಾರಕ್ಕೆ ವ್ಯಾಪಕ ಔಷಧಿಗಳನ್ನು ಸೂಚಿಸಿದ್ದಾನೆ. ಇಂದು ಪ್ರಾಣಿಗಳ ವರ್ತನೆಯನ್ನು ಅಧ್ಯಯನ ಮಾಡುವ ವಿಶೇಷ ವಿಜ್ಞಾನವೊಂದಿದೆ. (ಮ್ಯಾಮಲಿಯನ್ ಇಥೊಲಾಜಿ). ಅಂದು ಮಂಗರಸ 'ವ್ಯಾಘ್ರ ಮುಖಸ್ತಂಭನ' ಎಂಬ ವಿಶೇಷ ಸಂಗತಿಯನ್ನು ಕ್ರೂರ ಮೃಗಗಳನ್ನು ವಶೀಕರಿಸುವ ವಿಜ್ಞಾನವನ್ನು ಪ್ರಸ್ತಾಪಿಸಿದ್ದಾನೆ. ಹೊಯ್ಸಳ ಸಾಮ್ರಾಜ್ಯದ ಮಾಂಡಳಿಕನಾಗಿದ್ದ ಈ ಕವಿಯ ಕಾಲದಲ್ಲಿ ನಾಡಿಗಿಂತ ಕಾಡೇ ಹೆಚ್ಚಾಗಿತ್ತು. ಕ್ರೂರಮೃಗ ಹುಲಿಯ ಸಂತಾನ ಸಹಜವಾಗಿ ಅಧಿಕವಾಗಿತ್ತು. ಹದಿನಾರನೆ ಅಧಿಕಾರಾಂತ್ಯದಲ್ಲಿ ಹುಲಿಯ ಬಾಯಿಕಟ್ಟುವ ಮಂತ್ರಕ್ಕೆ, ಹುಲಿಯಿಂದ ಅಪಾಯ ಒದಗದ ರೀತಿ ನರರ ಕೊರಳಿಗೆ ಕಟ್ಟುವ ಕಂಬಳಿ ದಾರದ ರಕ್ಷೆಗೆ ಮಹತ್ವ ಒದಗಿದೆ.

ಪ್ರಥಮ ವಿಷ ಚಿಕಿತ್ಸೆ ಗ್ರಂಥ

'ಖಗೇಂದ್ರಮಣಿ ದರ್ಪಣ'ದ ಹೆಸರು ಕೊಂಚ ಗಲಿಬಿಲಿಗೆ ಕಾರಣ. ಖಗ ಎಂದರೆ ಪಕ್ಷಿರಾಜ ಗರುಡ. ಮಣಿ ಎಂದರೆ ಗರುಡಮಣಿ. ಹಾವಿನ ವಿಷ ಹೀರುವ ಪಚ್ಚೆ ಕಲ್ಲು, ಹಾವಾಡಿಗರ ಬಳಿ ಇಂದಿಗೂ ಗರುಡ ಮಣಿ ಎಂಬ ನೀಲಿ–ಕರಿ ವಸ್ತು ಇದೆ. ಅಂಥ ಗರುಡ ಮಣಿಗೆ ಕೈಗನ್ನಡಿಯೆಂಬಂತೆ ಈ ಕೃತಿ. ಖ್ಯಾತ ವ್ಯಾಕರಣ ಗ್ರಂಥ ಕೇಶಿರಾಜನ ಶಬ್ದಮಣಿದರ್ಪಣದಂತೆ ತನ್ನ ಕೃತಿಯೂ ಹೆಸರಾಂತ ಗ್ರಂಥವಾಗಲಿ ಎಂಬ ಆಶಯ ಮಂಗರಸನಿಗೆ ಇತ್ತೇನೋ. ಚೇಳು, ಜರಿ, ಕೀಟ, ಜಿಗಣೆ, ತಗಣೆ, ಜೇನುನೊಣದಂತಹ ವಿಷ ಜಂತು ಕಡಿತಕ್ಕೆ ಸಣ್ಣಪುಟ್ಟ ಮನೆಮದ್ದುಗಳಿವೆ. ಉದಾಹರಣೆಗೆ ಮಲೆನಾಡಿನ ಮನೆಗಳಲ್ಲಿ ಇಂದಿಗೂ ಸಿಹಿ ಕುಂಬಳಕಾಯಿ ತೊಟ್ಟು ಅರೆದು ಲೇಪಿಸಿ ಚೇಳು, ಜರಿ ಕಡಿತದ ಉರಿ, ಬಾವು, ನೋವು ನೀಗುವ ಪ್ರಥಮ ಚಿಕಿತ್ಸೆ ಇದೆ. ಅತ್ಯಯಿಕಾವಸ್ಥೆ (ಎಮರಜೆನ್ಸಿ) ಅಂದರೆ ಹಾವು ಕಡಿತದ ರೋಗಿ ಮೈಮರೆತಿದ್ದಾನೆ. (ಕೊಮಾ) ಬಾಯಿ ಬಿಡಲೊಲ್ಲನು. ಆಗ ನೆತ್ತಿ ಮೇಲೆ ಕಾಗೆ ಕಾಲಿನಂತಹ ಆಕಾರದಲ್ಲಿ ಗೀರಿ ಗಾಯ ಮಾಡುವ ಮತ್ತು ಅಲ್ಲಿ ವಿಷಹರ ಯೋಗ ಇರಿಸುವ ಚಿಕಿತ್ಸೆ ವಿಧಾನ ಮಂಗರಸನದ್ದು.

ಜೈನ ಕವಿಯಾದರೂ ಪ್ರಾಣ ಉಳಿಸುವ ಆತನ ಛಲ, ಬಲ ಪ್ರಶಂಸಾರ್ಹ. ನೆಲಬೇವು, ಆಡುಮುಟ್ಟದ ಬಳ್ಳಿ, ಈಶ್ವರಿ, ಎಕ್ಕದ ಗಿಡ, ಗುಲಗುಂಜಯಂಥವು ಮಂಗರಸನ ಪ್ರಕಾರ ಪಥಮ ಆದ್ಯತೆಯ ವಿಷಹರ ಮೂಲಿಕೆಗಳು. ದೇವದಾರು, ಆಗಿಲು, ಜಟಾಮಾಂಸೀ, ಕುಂಕುಮ ಕೇಸರಿ, ಗುಗ್ಗುಳ, ಅತಿಬಜೆ, ವತ್ಸನಾಭಿ ಎಂಬ ಕೆಲವು ಮೂಲಿಕೆಗಳ ಉಲ್ಲೇಖ ಮಂಗರಸನ ಕೃತಿಯ ಉದ್ದಗಲಕ್ಕಿದೆ. ಆದರೆ ಇವಾವುವೂ ಕರ್ನಾಟಕದಲ್ಲಿ ಮಾತ್ರವಲ್ಲ, ಮಧ್ಯ ದಕ್ಷಿಣ ಭಾರತದಲ್ಲೆಲ್ಲೂ ಸಿಗಲಾರದಂತಹ ಮೂಲಿಕೆಗಳು. ಎಲ್ಲವೂ ಪಶ್ಚಿಮೋತ್ತರದ ಗುಜರಾತ, ರಾಜಸ್ತಾನ (ಗುಗ್ಗುಳ), ಉತ್ತರದ ಕಾಶ್ಮೀರ (ಕುಂಕುಮ ಕೇಸರಿ) ಮತ್ತು ಹಿಮಾಲಯ ಕಣಿವೆ (ಅತಿಬಜೆ, ದೇವದಾರು, ಆಗಿಲು, ಮರದರಶಿನ) ಬೆಟ್ಟಸಾಲಿನ ಸೂಜಿ ಮೊನೆ ಕಾಡಿನ ಸಂಪತ್ತು. ಹಿಮಾಲಯ ಎಲ್ಲಿ, ಮುಗುಳಿಪುರವೆಲ್ಲಿಯದು? ಮಂಗರಸನ ಕಾಲಕ್ಕೆ ಈ ಎಲ್ಲ ಮೂಲಿಕೆಯ ಒಣನಾರು, ಬೇರು ಸಾಮಗ್ರಿ ಇಂದು ಗ್ರಂಥಿಗೆ ಅಂಗಡಿಯಲ್ಲಿ ಸಿಗುವಂತೆಯೇ ಅಂದು ವಲಸಿಗ ವ್ಯಾಪಾರಿ (ಸಾರ್ಥ)ಗಳ ಬಳಿ ದೊರಕುತ್ತಿತ್ತೇನೋ, ಬೆಲೆ ತೆತ್ತು ಖರೀದಿಸುವ ಪ್ರಸಂಗ ಅಂದಿಗೂ ಇತ್ತು ಎಂದೆನಿಸುತ್ತದೆ.

ಮುಗುಳಿಪುರದ ಸಮೀಪ ಹತ್ತಿಪ್ಪತ್ತು ಮೈಲಿ ವ್ಯಾಪ್ತಿಯಲ್ಲಿರುವ ಇಂದಿನ ಹಾಸನ ಜಿಲ್ಲೆಯ ಪ್ರಸಿದ್ದ ಶಿಲ್ಪ ವೈಭವ (ಬೇಲೂರು ಹಳೆಬೀಡು ಪೂರ್ವದ್ದು) ದ ದೊಡ್ಡಗದ್ದೇವಳ್ಳಿಯ ಮಹಾಲಕ್ಷ್ಮೀ ದೇಗುಲದ ಕಾಲ ಮಂಗರಸನ ಕಾಲದ ಆಚೀಚಿನದೇ ಆಗಿರಬೇಕು. ಅದನ್ನು ಕಟ್ಟಿಸಿದ ಕುಲ್ಲಣ ರಾವುತನೆಂಬಾತ ಮಧ್ಯ ಭಾರತದ ವ್ಯಾಪಾರಿ. ಆತನಿಗೆ ವ್ಯಾಪಾರದಲ್ಲಿ ಉಂಟಾದ ಅತಿಶಯ ಲಾಭದ ಹಣವನ್ನು ಕೆರೆಯ ನೀರು ಕೆರೆಗೆ ಚೆಲ್ಲುವಂತೆ ವ್ಯಾಪಾರ ನಡೆದ ಜಾಗದಲ್ಲಿ ವಿನಿಯೋಗಿಸಿ ಲಕ್ಷ್ಮೀ ಮಂದಿರ ಕಟ್ಟಿಸಿದ. ದೊಡ್ಡ ಗದ್ದೆವಳ್ಳಿಯಲ್ಲಿ ಅದು ಇಂದಿಗೂ ಇದೆ. ಇಂತಹ ವ್ಯಾಪಾರಿಗಳೇ ಉತ್ತರಭಾರತದ ಅಮೂಲ್ಯ. ವಿರಳ ಗಿಡಮೂಲಿಕೆಗಳನ್ನು ವ್ಯಾಪಾರಕ್ಕಾಗಿ ದಕ್ಷಿಣಕ್ಕಾಗಿ ತಿರುಗುತ್ತಿದ್ದಿರಬೇಕು. ಅಂತಹ

ವಿರಳ ಮೂಲಿಕೆಗಳನ್ನು ಮಂಗರಸ ಔಷಧಿಯಾಗಿ ಪ್ರಯೋಗಿಸಿದ್ದಾನೆ. ಅಷ್ಟೇ ಅಲ್ಲ ತನಗಿಂತ ಪೂರ್ವದ ಕವಿಗಳನ್ನು ತನ್ನ ಕೃತಿಯಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತಾನೆ.

"ಆದಿಯೊಳ್ ಪೂಜ್ಯಪಾದಾದಿ ಮುನಿಗಳ ಪೇಳ್ದರ್"[4] ಎಂಬ ವಿನಯ ಮಂಗರಸನದು. ತನ್ನ ಕೃತಿಯ ಸಂಗತಿಗಳನ್ನು ಹಿಂದೆ ಪೂಜ್ಯಪಾದ, ಸೋಮನಾಥ ಮುಂತಾದ ಕವಿಗಳು ನೆನೆಯುತ್ತಾನೆ. ಆದರೆ ಕ್ರಿ.ಪೂ. ಅಥವಾ ಕ್ರಿಸ್ತೋತ್ತರ ಯುಗದ ಆಯುರ್ವೇದ ಗ್ರಂಥಗಳಲ್ಲಿ ವಿಷವೈದ್ಯವು 'ಆಗದತಂತ್ರ' ಎಂಬ ಹೆಸರಿನಡಿ ತನ್ನ ಎಂಟು ಆಯುರ್ವೇದ ಅಂಗಗಳಲ್ಲೊಂದು ವಿಶೇಷ ವಿಭಾಗ ಎಂದಷ್ಟೇ ಪ್ರಸ್ತಾಪಗೊಳ್ಳುತ್ತದೆ. ಸ್ವತಂತ್ರ ಕೃತಿ ಯಾವುವೂ ಇಡೀ ಭಾರತದಲ್ಲಿಯೇ ಇಲ್ಲ. ಈ ವಿಶೇಷ ಕೀರ್ತಿಯಿಂದಾಗಿ ಕವಿ ಮಂಗರಸನಿಗೆ, ಕನ್ನಡ ಭಾಷೆಗೆ ಪ್ರಥಮ ಪ್ರಾಶಸ್ತ್ಯ ಸಲ್ಲುತ್ತದೆ. ನಗರೆ, ಸೀಗುಡಿತೆ, ಊಲಿ (ಕರಿ, ಬಿಳಿ) ಮುಂತಾದ 30–40 ಮೂಲಿಕೆಗಳ ಪ್ರಥಮ ಪ್ರಸ್ತಾಪ ಮಂಗರಸನ ಕಾವ್ಯದ ವೈಶಿಷ್ಟ್ಯ, ಮಡಹಾಗಲವಂತೂ ಇಡೀ ಕೃತಿಯ ಉದ್ದಗಲಕ್ಕೆ ವಿಷಹರ ಮೂಲಿಕೆ ಎಂಬ ಹಣೆಪಟ್ಟಿಯಡಿ ವೈಭವೀಕರಿಸಿಕೊಂಡಿದೆ. ಕೊಂಕಣಿ ಸಮುದಾಯದಲ್ಲಿ ಶ್ರಾವಣ ಮಾಸದಲ್ಲಿ ಇಂದಿಗೂ ಸಹ ಎಷ್ಟೇ ಬೆಲೆ ತೆತ್ತಾದರೂ ಮಡಿಹಾಗಲಕಾಯಿ ಖರೀದಿಸಿ ವಿವಿಧ ಖಾದ್ಯ ತಯಾರಿಸಿ ತಿನ್ನುವ ಸಂಪ್ರದಾಯವಿದೆ. ದೇಹಕ್ಕೆ ವಿಷನಿರೋಧಕತೆ ಬರಲು ಮಾಡಿದ ಈ ಪದ್ಧತಿ ಖಂಡಿತ ಅಧ್ಯಯನ ಯೋಗ್ಯ ಜನಪದ ಸಂಗತಿಯಾಗಿದೆ.

ಹಾವಿನ ವಿಷದಿಂದ ಸಾವು ಉಂಟಾಗುವ ಸಂಗತಿ, ವಿವಿಧ ಹಂತಗಳಲ್ಲಿ ಅದು ದೇಹವನ್ನು ವ್ಯಾಪಿಸುವ ವಿಧಾನವೂ ಸಹ ಈ ಗ್ರಂಥದ ಉದ್ದಗಲಕ್ಕೆ ವರ್ಣಿತವಾಗಿದೆ. ಆಯಾ ಹಂತದಲ್ಲಿ ಅದನ್ನು ತಡೆಯುವ ವಿಧಾನ, ಬಳಸುವ ಮೂಲಿಕೆ ಖಂಡಿತ ವೈಜ್ಞಾನಿಕ ಅನ್ವೇಷಣೆಯ ಅರ್ಹವಾದದ್ದು. ಕ್ಯಾನ್ಸರನ ವ್ಯಾಪಕತೆ ಮತ್ತು ವಿಷ ವೇಗ ಪ್ರವಹಿಸುವಿಕೆಯಲ್ಲಿ ಸಮಾನತೆ ಇದೆ. ಆ ರೀತಿಯಲ್ಲಿ ಯೋಚಿಸಿದಾಗ ವಿಷಹರ ಮೂಲಿಕೆಗಳು ಖಂಡಿತ ಕ್ಯಾನ್ಸರ್ ನಿರೋಧಕ ಮತ್ತು ನಿಯಂತ್ರಕವಾದವುಗಳು. ಇಂದು ಕ್ಯಾನ್ಸರ್ ಹತ್ತಿಕ್ಕುವ ಸೂಜಿಮದ್ದು ಟ್ಯಾಕೋಲಿನ್ ಮೂಲ ಒಂದು ಎಲೆ, ಟಾಕ್ಸಸ್ ಬಕ್ಕೇಟಾ ಎಂಬ ಸೂಜಿ ಮೊನೆ ಎಲೆಯ ಕಾಡಿನ ಮರದ್ದು. ತಾಳೀಸ ಪತ್ರವೆಂಬ ಹೆಸರಿನಡಿ ಈ ಮರದೆಲೆಯ ವರ್ಣನೆಯನ್ನು ಮಂಗರಸ ಮಾಡಿದ್ದಾನೆ.

ಬರಿಗಾಲ ವಿಷ ವೈದ್ಯರು ಅರ್ಬುದ, ಗಂಟು, ಹಳೆ ಗಾಯ ಕರಗಿಸಲು ಬಿಕ್ಕೆ ಅಂಟು ಮೇಣ ಬಳಸುತ್ತಾರೆ. ಜಾನುವಾರುಗಳಿಗಂತೂ ಇದು ದಿವ್ಯೌಷಧ. ನಂಜಬಟ್ಟಲ ಹೂವಿನ ಕಾಡಿಗೆ ತಾಯಾರಿಸಿ ಕೋಮಾದಲ್ಲಿದ್ದ ರೋಗಿಗೆ ಅರಿವು ಬರಿಸುವ ವಿಧಾನಗಳು ಅಂದಿನ ಔಷಧ ಪ್ರಯೋಗ ವಿಜ್ಞಾನಕ್ಕೆ ಹಿಡಿದ ಕೈಗನ್ನಡಿ. ಕಣ್ಣಿನ ಬಿಳಿಗುಡ್ಡೆಯಲ್ಲಿ ಕಣ್ಣಿವೆಯಲ್ಲಿ ಅಂಥ ತೀಕ್ಷ್ಣ ಕಾಡಿಗೆ ಮೂಲಕ ಮೂರ್ಛೆ ಹೋಗಿ ಬಿದ್ದವನನ್ನು ಎದ್ದು ಕುಳ್ಳಿರಿಸುವ ವಿದ್ಯೆ ಮಂಗರಸನೇ ಸೈ. ಮಂಗರಸನ ಕಾವ್ಯದಲ್ಲಿ ಅಪಾರ ವೈದ್ಯಜ್ಞಾನವಷ್ಟೇ ಅಲ್ಲ ಭಾಷಾ ವಿಜ್ಞಾನ ಇದೆ, ದಕ್ಷಿಣೋತ್ತರ ಪ್ರಾಂತಗಳ ಭಾಷಾ ಶಬ್ದಗಳ ವೈವಿಧ್ಯಮಯ ಆಕಾರವಿದು ಅಷ್ಟೇ ಅಲ್ಲ ಅದ್ಭುತ ಭಾಷಾ ಸಂಪನ್ನತೆಯಿಂದ ಕೂಡಿದ ಚಂಪೂ ಕಾವ್ಯವಿದು. ಉಪಮಾನ ಕವಿ ಚತುರ ಮಂಗರಸನ ಜಾಣೆಗೆ ಒಂದು ನಿದರ್ಶನ ಗಮನಿಸಬಹುದು. ತೋಳ ಕಡಿದಾಗ ಅಂಜನ ಹಾಕಿ ವಿಷ ಇಳಿಸುವ ಪ್ರಸಂಗಕ್ಕೆ ಉಪಮ ಹೀಗಿದೆ. 'ಧನಮಂ ಸ್ತ್ರೀ ವ್ಯಸನಿಗಳೆರೆವ ತೆರದಿಂ..!' ಇನ್ನೊಂದು 'ಸುಗ್ಗಿಯ ಬೆಳದಿಂಗಳ ಕರ್ತಲೆ ವೋರಲುವಿದು.' ಮಂಗರಸನ ಕೃತಿಯಲ್ಲಿ ಸಾಹಿತ್ಯವಿದೆ, ಸಾಂಗತ್ಯ, ಕವಿತ್ವ, ವಿಜ್ಞಾನ, ಲೋಕಹಿತ, ಜನಪದ ,ವಿಜ್ಞಾನ, ಸಸ್ಯಶಾಸ್ತ್ರ, ತತ್ವಶಾಸ್ತ್ರ, ಮಾನವ ಇತಿಹಾಸ, ಪ್ರಾಣಿಶಾಸ್ತ್ರ ಎಲ್ಲವೂ ಇವೆ.

ಹೀಗಾಗಿ ಮಂಗರಾಜನ ಖಗೇಂದ್ರ ಮಣಿದರ್ಪಣ ಕನ್ನಡ ವಿಷ ವೈದ್ಯಶಾಸ್ತ್ರಕ್ಕೆ ನೀಡಿದ ಅಮೂಲ್ಯ ಕಾಣಿಕೆಯಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಒಟ್ಟಿನಲ್ಲಿ ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳಲ್ಲಿ ವಿಷ ಚಿಕಿತ್ಸೆಯ ಕುರಿತು ಅಲ್ಲಲ್ಲಿ ಪ್ರಾಸಂಗಿಕವಾಗಿ ಚರ್ಚಿತವಾಗಿದ್ದರೆ ವಿಶೇಷವಾಗಿ ವಿಷ ವೈದ್ಯದ ಕುರಿತು ವಿವರವಾಗಿ ಚರ್ಚಿಸಲ್ಪಟ್ಟ ಅಮೂಲ್ಯ ಕೃತಿಗಳೆಂದರೆ ಮಂಗರಾಜನ ಖಗೇಂದ್ರ ಮಣಿದರ್ಪಣ ಕೃತಿಯು ಕೂಡ ಒಂದು.

ಕೊನೆಯ ಟಿಪ್ಪಣಿಗಳು :

1. ಆರ್. ನರಸಿಂಹಚಾರ್ಯ, ಕರ್ನಾಟಕ ಕವಿ ಚರಿತೆ ಸಂಪುಟ–1, ಪುಟ–306
2. ಧನ್ಯಕುಮಾರ ಇಜಾರಿ, ಜೈನ ವೈದ್ಯಕೀಯ ಪರಂಪರೆ, ಪುಟ–68.
3. ಬಿ.ಎಸ್.ಸಣ್ಣಯ್ಯ (ಸಂ), ಮಂಗರಸ ವಿರಚಿತ ಖಗೇಂದ್ರ ಮಣಿದರ್ಪಣ, ಪುಟ–8

4 ವೆಂಕಟರಾವ್, ಖಗೇಂದ್ರ ಮಣಿದರ್ಪಣ, ಪುಟ–18